**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**

**ನ್ಯಾಯಾಲಯ, ಹೊಳೆನರಸೀಪುರ**

ಫ್ರಾಸ –9

**CC No**: 41/2020 ಚಾಸ– 11

| | |
|---|---|
| ಹೆಸರು | **ರೂಪೇಶ್ ಎಸ್.ಎನ್** |
| ತಂದೆ/ಗಂಡನ ಹೆಸರು | **ನಾರಾಯಣಸ್ವಾಮಿ** |
| ವಯಸ್ಸು | **40 ವರ್ಷ** |
| ಉದ್ಯೋಗ | **ಪಿ.ಸಿ., ಪೆನಶನ್ ಮೊಹಲ್ಲಾ ಪೊಲೀಸ್ ಠಾಣೆ, ಹಾಸನ.** |
| ವಾಸಸ್ಥಳ | **ಹಾಸನ** |

ದಿನಾಂಕಃ 21.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ ರವರಿಂದಃ–**

ನಾನು ಜೂನ್ 2018 ರಿಂದ ಜೂನ್ 2023 ರವರಗೆ ಶಾಂತಿಗ್ರಾಮ ಪೊಲಿಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ

ದಿಃ 03.01.2020 ರಂದು ನನ್ನನ್ನು, ಚಾಸಾ 8, 9, 10 ಮತ್ತು 12 ರವರನ್ನು ಚಾಸಾ 13 ರವರು ಶಾಂತಿಗ್ರಾಮ ಪೊಲೀಸ್ ಠಾಣೆಯ ಮೊಕದ್ದಮೆ ನಂ.142/2019 ರಲ್ಲಿ ಕಳ್ಳತನವಾದ ಕುರಿ ಮತ್ತು ಆರೋಪಿತರನ್ನು ಪತ್ತೆ ಹಚ್ಚುವ ಕಾರ್ಯಕ್ಕಾಗಿ ನೇಮಿಸಿದ್ದು, ಅದರಂತೆ ನಾನು ಶಾಂತಿಗ್ರಾಮ ಪೊಲೀಸ್ ಠಾಣೆಯ ಸರಹದ್ದಿನಲ್ಲಿ ಗಸ್ತು ಮಾಡುತ್ತಿದ್ದಾಗ ಸಂಜೆ 6–30 ಗಂಟೆ ಸಮಯದಲ್ಲಿ ಹೆಚ್.ಅರಸನಹಳ್ಳಿ ಗ್ರಾಮ ಮಳಲಿ ಕ್ರಾಸ್ ಸಮೀಪ ಮೊಸಳೆ ಹೊಸಹಳ್ಳಿ ಕಡೆಯಿಂದ

ಕಾರು ನಂ ಕೆಎ-09-ಎನ್-1730 ಬಂದಿದ್ದು, ಸದರಿ ವಾಹನವನ್ನು ತಡೆದು ನಿಲ್ಲಿಸಿ ವಿಚಾರಿಸಿದಾಗ ಚಾಲಕನು ತನ್ನ ಹೆಸರನ್ನು ಶಕೀರ್ ಬಿನ್ ಲೇಟ್ ಅಸ್ಲಂ ಪಾಷ ಎಂದು ಮತ್ತು ಉಳಿದವರು ತಮ್ಮ ಹೆಸರುಗಳನ್ನು ಇಲಿಯಾಜ್ ಪಾಷ ಬಿನ್ ಸಿರಾಜ್ ಪಾಷ ಹಾಗೂ ಅರುಣ್ ಬಿನ್ ಜಯ ಎಂದು ಹೇಳಿದರು. ಅದೇ ಸಮಯಕ್ಕೆ ಮೊಸಳೆ ಹೊಸಹಳ್ಳಿ ಕಡೆಯಿಂದ ಇನ್ನೊಂದು ಕಾರು ನಂ. ಕೆಎ-04-ಎಂಸಿ-0800 ಬಂದಿದ್ದು, ಅದರನ್ನು ಸಹಾ ತಡೆದು ನಿಲ್ಲಿಸಿ ವಿಚಾರಣೆ ಮಾಡುವಷ್ಟರಲ್ಲಿ ಚಾಲಕ ಓಡಿ ಹೋಗಿದ್ದು, ಸದರಿ ಕಾರಿನಲ್ಲಿದ ಇನ್ನೊಬ್ಬ ವ್ಯಕ್ತಿಯ ಹೆಸರು ಮತ್ತು ವಿಳಾಸ ಕೇಳಲಾಗಿ ತನ್ನ ಹೆಸರನ್ನು ಇಬ್ರಾಹಿಂ ಬಿನ್ ಖಾದರ್ ಎಂದು ಹೇಳಿದ್ದು, ಓಡಿ ಹೋದ ವ್ಯಕ್ತಿಯ ಹೆಸರು ಸಮೀರ್ ಅಹಮ್ಮದ್ ಬಿನ್ ಬಶೀರ್ ಎಂದು ಹೇಳಿದ. ನಂತರ ವಿಚಾರಣೆಗೆ ಒಳಪಡಿಸಿದಾಗ ಆರೋಪಿತರು ಯಾವುದೇ ಸ್ಪಷ್ಟವಾದ ಮಾಹಿತಿಯನ್ನು ನೀಡಲಿಲ್ಲ. ಆಗ ನಾವು ಸದರಿ ವ್ಯಕ್ತಿಗಳನ್ನು ವಶಕ್ಕೆ ಪಡೆದು ಕಾರುಗಳ ಸಮೇತ ರಾತ್ರಿ 7-30 ಸಮಯಕ್ಕೆ ಚಾಸಾ 13 ರವರ ಮುಂದೆ ಹಾಜರುಪಡಿಸಿದೆವು. ನಂತರ ಚಾಸಾ 13 ರವರು ಆರೋಪಿತರನ್ನು ದಿಃ 04.01.2020 ರಂದು ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತಾರೆ.

ಈ ಬಗ್ಗೆ ನಾನು ದಿಃ 08.01.2020 ರಂದು ಚಾಸಾ 13 ರವರ ಮುಂದೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ವಿಸಿ ಮೂಲಕ ಹಾಜರಾದ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಉಳಿದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ**

ದಿಃ 03.01.2020 ರಂದು ನನ್ನನ್ನು, ಚಾಸಾ 8, 9, 10 ಮತ್ತು 12 ರವರನ್ನು ಚಾಸಾ 13 ರವರು ಶಾಂತಿಗ್ರಾಮ ಪೊಲೀಸ್ ಠಾಣೆಯ ಮೊಕದ್ದಮೆ ನಂ.142/2019 ರಲ್ಲಿ ಕಳ್ಳತನವಾದ ಕುರಿ ಮತ್ತು ಆರೋಪಿತರನ್ನು ಪತ್ತೆ ಹಚ್ಚುವ ಕಾರ್ಯಕ್ಕಾಗಿ ನೇಮಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಶಾಂತಿಗ್ರಾಮ ಪೊಲೀಸ್ ಠಾಣೆಯ ಸರಹದ್ದಿನಲ್ಲಿ ಗಸ್ತು ಮಾಡುತ್ತಿದ್ದಾಗ ಸಂಜೆ 6-30 ಗಂಟೆ ಸಮಯದಲ್ಲಿ ಹೆಚ್.ಅರಸನಹಳ್ಳಿ ಗ್ರಾಮ ಮಳಲಿ ಕ್ರಾಸ್ ಸಮೀಪ ಮೊಸಳೆ ಹೊಸಹಳ್ಳಿ ಕಡೆಯಿಂದ ಕಾರು ನಂ ಕೆಎ-09-ಎನ್-1730 ಬಂದಿದ್ದು, ಸದರಿ ವಾಹನವನ್ನು ತಡೆದು ನಿಲ್ಲಿಸಿ ವಿಚಾರಿಸಿದಾಗ ಚಾಲಕನು ತನ್ನ ಹೆಸರನ್ನು ಶಕೀರ್ ಬಿನ್ ಲೇಟ್ ಅಸ್ಲಂ ಪಾಷ ಎಂದು ಮತ್ತು ಉಳಿದವರು ತಮ್ಮ ಹೆಸರುಗಳನ್ನು ಇಲಿಯಾಜ್ ಪಾಷ ಬಿನ್ ಸಿರಾಜ್ ಪಾಷ ಹಾಗೂ ಅರುಣ್ ಬಿನ್ ಜಯ ಎಂದು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ಸಮಯಕ್ಕೆ ಮೊಸಳೆ ಹೊಸಹಳ್ಳಿ ಕಡೆಯಿಂದ ಇನ್ನೊಂದು ಕಾರು ನಂ. ಕೆಎ-04-ಎಂಸಿ-0800 ಬಂದಿದ್ದು, ಅದರನ್ನು ಸಹಾ ತಡೆದು ನಿಲ್ಲಿಸಿ ವಿಚಾರಣೆ ಮಾಡುವಷ್ಟರಲ್ಲಿ ಚಾಲಕ ಓಡಿ ಹೋಗಿದ್ದು, ಸದರಿ ಕಾರಿನಲ್ಲಿದ ಇನ್ನೊಬ್ಬ ವ್ಯಕ್ತಿಯ ಹೆಸರು ಮತ್ತು ವಿಳಾಸ ಕೇಳಲಾಗಿ ತನ್ನ ಹೆಸರನ್ನು ಇಬ್ರಾಹಿಂ ಬಿನ್ ಖಾದರ್ ಎಂದು ಹೇಳಿದ್ದು, ಓಡಿ ಹೋದ ವ್ಯಕ್ತಿಯ ಹೆಸರು ಸಮೀರ್ ಅಹಮ್ಮದ್ ಬಿನ್ ಬಶೀರ್ ಎಂದು ಹೇಳಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಸದರಿ ವ್ಯಕ್ತಿಗಳನ್ನು ವಶಕ್ಕೆ ಪಡೆದು ಕಾರುಗಳ ಸಮೇತ ರಾತ್ರಿ 7-30 ಸಮಯಕ್ಕೆ ಚಾಸಾ 13 ರವರ ಮುಂದೆ ಹಾಜರುಪಡಿಸಿದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 13 ನನ್ನ

ಮೇಲಾಧಿಕಾರಿಯಾಗಿರುವುದರಿಂದ ಯಾವುದೇ ಘಟನೆ ನಡೆಯದೇ ಇದ್ದರೂ ಸಹಾ ಚಾಸಾ 13 ರವರಿಗೆ ಸಹಾಯವಾಗಲೀ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.